ಬಿಲದಲ್ಲಿ ಇಲಿ ಹೆಗ್ಗಣಗಳು ಓಡುವ ಸದ್ದು ಎಂದು ಅಮ್ಮ ಹೇಳಿದ್ದಳು. ಕೋಣೆಯ ತುಂಬಾ ಆವರಿಸಿಕೊಂಡಿದ್ದ ಹಸೀ ನೆಲದ ತಣ್ಣನೆಯ ಮುಗ್ಗಲು ಕಂಪು. ಕೋಣೆಯ ತುಂಬಾ ತುಂಬಿದ್ದ ಏನೇನೋ ನೂರೆಂಟು ಸಾಮಾನು ಸರಂಜಾಮುಗಳು. ನಾಗೊಂದಿಗೆಯ ಮೇಲೆ ಸಾಲಾಗಿ ಕಂಠಕ್ಕೆ ಮಡಿಬಟ್ಟೆ ಕಟ್ಟಿಸಿಕೊಂಡು ಮುಸುಕು ಹೊದ್ದು ಕುಳಿತಿದ್ದ ಉಪ್ಪಿನಕಾಯಿ ಭರಣಿಗಳು, ಒಂದು ಬದಿಯಲ್ಲಿ ಬೇಯಿಸಿ ಉಪ್ಪುನೀರಿನಲ್ಲಿ ಹಾಕಿಟ್ಟಿದ್ದ ಕುಚ್ಚು ಮಾವಿನಕಾಯಿಗಳು ತುಂಬಿದ ಮಣ್ಣಿನ ಬಾನಿ. ಎಲ್ಲಾ ಸೇರಿ ಒಂದು ರೀತಿಯ ಸಮ್ಮಿಶ್ರವಾದ ಪ್ರಾಚೀನ ನೆನಪಿನಂತಾ ವಾಸನೆ ಅಲ್ಲಿ ತುಂಬಿಕೊಂಡಿತ್ತು! ಅಲ್ಲೇ ಇದ್ದ ಉಪ್ಪಿನ ಭರಣಿಯಿಂದ ಅಮ್ಮ ತೆಗೆದುಕೊಟ್ಟ ಕಹಿ ಒಗರು ರುಚಿಯ ನಿಂಬೆ ಸಿಪ್ಪೆಯನ್ನು ಚೀಪುತ್ತಾ ನಾನು ಬೆರಗಾಗಿದ್ದೆ... ಈ ಅಮ್ಮನಿಗೆ ಕಪ್ಪಡಿಗೆಮನೆಗೆ ಬರಲು ಭಯವಾಗುವುದಿಲ್ಲವೇ?

ಬಹುಶಃ ದೊಡ್ಡವರಿಗೆ ಈ ಬಿಳಿಮಂಡೆ ಮುದುಕಿ ಏನೂ ಮಾಡುವುದಿಲ್ಲ; ಇಲ್ಲದಿದ್ದರೆ ಆಗಾಗ ನಮ್ಮ ಮನೆಗೆ ಬರುತ್ತಿದ್ದ ವಿಧವೆ ಅಜ್ಜಿಯೊಬ್ಬಳು ಇದೇ ಕೋಣೆಯಲ್ಲಿ ರಾತ್ರಿ ಒಬ್ಬಳೇ ಹೆದರಿಕೆಯಿಲ್ಲದೇ ಹೇಗೆ ಮಲಗಲು ಸಾಧ್ಯ! ಬಿಳಿಮಂಡೆ ರಾಕ್ಷಸಿಯ ಸಂಗದಲ್ಲಿ ಇಡೀ ರಾತ್ರಿ ಕಳೆಯುತ್ತಿದ್ದ ಈ ಅಜ್ಜಿಯ ಧೈರ್ಯದ ಬಗ್ಗೆ ನನಗೆ ಅಸಾಧ್ಯ ಅಚ್ಚರಿಯಾಗುತ್ತಿತ್ತು !

ಹಾಗೆಯೇ ಹಿಂದೆ ಆ ಅಡಿಗೆಮನೆಯಲ್ಲಿ ಅಡಿಗೆ ಮಾಡುತ್ತಾ ತಮ್ಮ ಬದುಕಿನ ಬಹುಭಾಗವನ್ನು ಬೆಳಕಿಲ್ಲದ ಕತ್ತಲೆ ಕೋಣೆಯಲ್ಲೇ ಕಳೆಯುತ್ತಿದ್ದ ಹೆಂಗಸರನ್ನೊಮ್ಮೆ ನೆನೆಸಿ ಕೊಳ್ಳುತ್ತೇನೆ. ಇಕ್ಕಟ್ಟಾದ ಬೆಳಕಿಲ್ಲದ ಕೋಣೆ, ಹಗಲಿನಲ್ಲಿಯೂ ಹೊತ್ತಿಸಿಕೊಂಡ ಚಿಮಣಿಯ ದೀಪ, ಕಟ್ಟಿಗೆ ಒಲೆಯಲ್ಲಿ ಉರಿಯುತ್ತಿದ್ದ ಬೆಂಕಿಯ ಜೊತೆ ತುಂಬಿಕೊಳ್ಳುತ್ತಿದ್ದ ಹೊಗೆಯಲ್ಲಿ, ದೊಡ್ಡ ಗಾತ್ರದ ಚರಿಗೆಗಳಲ್ಲಿ ಅನ್ನ ಬಸಿಯುತ್ತಾ, ಕಲ್ಗಡಿಗೆಗಳಲ್ಲಿ ಮೇಲೋಗರ ಕುದಿಸುತ್ತಾ, ದೈತ್ಯಾಕಾರದ ಒರಳುಗಳಲ್ಲಿ ಬೀಸುತ್ತಾ ಕುಟ್ಟುತ್ತಾ ದಿನದ ಹೆಚ್ಚಿನ ಹೊತ್ತನ್ನು ಕಳೆಯುತ್ತಿದ್ದರು. ಮನೆ ತುಂಬಾ ಜನರಿರುತ್ತಿದ್ದ ಕುಟುಂಬಗಳಲ್ಲಿ ಅಡಿಗೆ ಮಾಡಿ ಉದ್ದನೆಯ ಪಂಕ್ತಿಗಳಿಗೆ ಬೆನ್ನು ಬಾಗಿಸಿ ಬಡಿಸಿ... ಬಡಿಸಿ... ಬೆನ್ನು ನೆಟ್ಟಗೆ ಮಾಡಲೂ ಪುರಸೊತ್ತಿಲ್ಲದೇ ಬೆನ್ನು ಕಾಯಂ ಆಗಿ ಬಗ್ಗಿಹೋಗಿ ಅರವತ್ತು ತುಂಬುವ ಮೊದಲೇ ಮುದುಕಿಯರಾಗಿ ಬಿಡುತ್ತಿದ್ದರು. ಅಡಿಗೆಮನೆ ಬಿಟ್ಟರೆ ಹಿತ್ತಲ ಕಡೆ, ಕೊಟ್ಟಿಗೆಯೇ ಅವರ ಪ್ರಪಂಚ. ಬಾವಿಯಿಂದ ನೀರು ಸೇದಿ, ಮುಸುರೆ, ಬಟ್ಟೆ ತೊಳೆಯುವುದು, ಸ್ನಾನ, ಸಾಲಾಗಿ ಸರತಿ ಸಾಲಿನಲ್ಲಿ ಹುಟ್ಟಿದ ಮಕ್ಕಳ ಮೀಯಿಸುವುದು. ಜೊತೆಗೆ ಕೊಟ್ಟಿಗೆ ತುಂಬಾ ಇರುತ್ತಿದ್ದ ದನ ಕರು, ಎಮ್ಮೆಗಳ ಕೊಟ್ಟಿಗೆ ಚಾಕರಿ. ನಮ್ಮಜ್ಜಿ ಮುತ್ತಜ್ಜಿಯರ ಬದುಕು ಇಷ್ಟರಲ್ಲಿಯೇ ಮುಗಿದು ಹೋಯಿತೇ! ನಡುಮನೆ, ಚೌಕಿಯ ಬಾಗಿಲು ದಾಟಿ ಅವರೆಲ್ಲ ಜಗುಲಿಗೆ ಬಂದದ್ದು ಯಾವಾಗ? ಹೆಬ್ಬಾಗಿಲು ಹೊಸಿಲು ದಾಟಿ ಅಂಗಳಕ್ಕೆ ಇಳಿದದ್ದು ಯಾವಾಗ? ಜಗುಲಿಗೆ ಬಂದು ಕೂರುವ ಸ್ವಾತಂತ್ರ್ಯವನ್ನಂತೂ ಆ ಕಪ್ಪಡಿಗೆಮನೆ ಅವರಿಗೆಂದೂ ಕೊಟ್ಟಿರಲಿಕ್ಕಿಲ್ಲ!

ನಮ್ಮಜ್ಜನೇನೋ ಸ್ವಲ್ಪ ದೊಡ್ಡ ಮನಸ್ಸು ಮಾಡಿ ಅಡಿಗೆಮನೆಯನ್ನು ಅಷ್ಟಿಷ್ಟು ಗಾಳಿ ಬೆಳಕು ಬರುತ್ತಿದ್ದ ಕಡೆಗೆ ಬದಲಾಯಿಸಿದರು. ಇಣುಕಿದರೆ ಆಕಾಶ ಕಾಣುವಂತೆ ಅಲ್ಲೊಂದು ಕಿಟಕಿಯೂ ಇತ್ತು.

ನಾವು ಚಿಕ್ಕವರಿರುವಾಗ ಇದೇ ಅಡಿಗೆಮನೆಯಲ್ಲಿ ಬೆಳಗ್ಗೆ ಬೇಗ ಎದ್ದು, ಉರಿಯುವ ಒಲೆಯ ಪಕ್ಕದಲ್ಲಿ ಕುಳಿತು, ಒಲೆಯ ಮೇಲೆ ಪಾತ್ರೆಯಲ್ಲಿ ಕುದಿಯುತ್ತಿದ್ದ ಬೆಲ್ಲದ ನೀರಿಗೆ ಅಮ್ಮ ಕಾಫಿ ಪುಡಿ ಬೆರೆಸಿ ಡಿಕಾಕ್ಷನ್ ತಯಾರಿಸಿ ಹಾಲು ಬೆರೆಸಿ, ದೊಡ್ಡ ಲೋಟದ ತುಂಬಾ ಹದ ಮಾಡಿ ಕೊಡುವುದನ್ನೇ ಮೂಗರಳಿಸಿ ಕಾಯ್ದು ಕೊಂಡಿರುತ್ತಿದ್ದೆವು.

ಆ ಮನೆ... ಅಡಿಗೆಮನೆ... ಮತ್ತು ಕಪ್ಪಡಿಗೆಮನೆ ಎಲ್ಲವೂ ಇನ್ನೂ ಅಲ್ಲಿಯೇ ಇವೆ. ಆದರೆ, ಮನೆಗೆ